**ಪತ್ರಿಕಾ ಪ್ರಕಟಣೆ**

**ವಿಜಯಪುರ**
**ದಿನಾಂಕ: 02.09.2021.**

**1] ಮಹಿಳಾ ಪೊಲೀಸ ಠಾಣೆ ಗುನ್ನೆ ನಂ: 99/2021 ಕಲಂ: ಮಹಿಳೆ ಕಾಣೆ.**

ದಿನಾಂಕ: 01.09.2021 **ರಂದು** 13.00 ಗಂಟೆಯ ಸುಮಾರಿಗೆ ಇದರಲ್ಲಿಯ ಕಾಣೆಯಾದ ಪಿಂಕಿ ತಂ॥ ಶೇರಸಿಂಗ್ ಚಿತ್ತೋಡಿಯಾ, ವಯಾ: 22 ವರ್ಷ, ಸಾ॥ ಅಥಣಿ ರಸ್ತೆ ಸ್ಲಂ ಏರಿಯಾ, ವಿಜಯಪುರ ಇವಳು ವಿಜಯಪುರ ಶಹರದ ವಜ್ರಹನುಮಾನ ನಗರದಲ್ಲಿರುವ ವೆಲ್‌ಪೇರ್ ಸೊಸೈಟಿಯಿಂದ ಯಾರಿಗೂ ಹೇಳದೆ ಕೇಳದೆ ಎಲ್ಲಿಗೋ ಹೋಗಿ ಕಾಣೆಯಾಗಿರುತ್ತಾಳೆ. ಕಾಣೆಯಾಗಿರುವ ಪಿಂಕಿ ಇವಳದು ಕೊಲು ಮುಖ, ಗೋದಿಗೆಂಪು ಮೈಬಣ್ಣ, ಮೈಯಿಂದ ಸಾದಾರಣ ಮೈಕಟ್ಟು, ಎತ್ತರ: 4 ಪೂಟ್ 5 ಇಂಚು ಇದ್ದು, ಗುಜರಾತಿ, ಹಿಂದಿ ಭಾಷೆ ಮಾತನಾಡುತ್ತಾಳೆ. ಹೋಗುವಾಗ ಹಳದಿ ಬಣ್ಣದ ಚೂಡಿದಾರ ಧರಿಸಿಕೊಂಡು ಹೋಗಿರುತ್ತಾರೆ ಈ ಬಗ್ಗೆ ಯಶವಂತ ಎಂ. ಲಮಾಣಿ, ವಯಾ: 49 ವರ್ಷ, ಸಾ॥ ವಿಜಯಲಕ್ಷ್ಮೀ ಎಜುಕೇಷನ್ ಮತ್ತು ಸೋಷಿಯಲ್ ವೆಲ್‌ಪೇರ್ ಸೊಸೈಟಿ, ವಿಜಯಪುರ ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 01.09.2021 ರಂದು ಮಹಿಳಾ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.

**2] ಝಳಕಿ ಪೊಲೀಸ ಠಾಣೆ ಗುನ್ನಾ. ನಂ: 83/2021 ಕಲಂ: 78(3) ಕೆ.ಪಿ.ಆ್ಯಕ್ಟ**

ದಿನಾಂಕ: 01.09.2021 ರಂದು ಮುಂಜ್ಯಾನೆ 11.45 ಗಂಟೆ ಸುಮಾರಿಗೆ ಇದರಲ್ಲಿಯ ಆರೋಪಿತನಾದ ರಾಮಚಂದ್ರ ಹಣಮಂತ ಡಂಗೆ ಸಾ: ಚಣೆಗಾಂವ ಸಿದ್ದಾಪೂರ ವಸ್ತಿ ತಾಲೂಕ ಚಡಚಣ ಜಿ॥ ವಿಜಯಪುರ ಈತನು ಚಣೆಗಾಂವ ಗ್ರಾಮದ ಹತ್ತಿರ ಇರುವ ಸಿದ್ದಾಪೂರ ವಸ್ತಿಯಲ್ಲಿಯ ತನ್ನ ಕಿರಾಣಿ ಅಂಗಡಿಯ ಮುಂದೆ ಸಾರ್ವಜನಿಕ ಸ್ಥಳದಲ್ಲಿ ನಿಂತು ಒಂದು ರೂಪಾಯಿಗೆ 80/-ರೂ. ಕೊಡುವ ಕರಾರಿನ ಮೇರೆಗೆ ಕಲ್ಯಾಣಿ ಅಂಬುವ ಮಟಕಾ ಓ. ಸಿ. ಜೂಜಾಟವನ್ನು ಸಾರ್ವಜನಿಕರಿಂದ ಹಣ ಪಡೆದುಕೊಂಡು ನಡೆಸುತ್ತಿರುವಾಗ ರೋಖ ಹಣ 330. ರೂಪಾಯಿಗಳು ಹಾಗೂ ಓ.ಸಿ ನಂಬರಗಳನ್ನು ಬರೆದುಕೊಂಡ ಚೀಟಿ ಅಲ್ಲದೇ ಹಾಗೂ ಬಾಲ್‌ಪೆನ್‌ದೊಂದಿಗೆ ಈ ಪ್ರಕಾರ ಸಾಧನ ಸಾಮಗ್ರಿಗಳೊಂದಿಗೆ ಸಿಕ್ಕ ಅಪರಾದ. ಈ ಬಗ್ಗೆ ಸ:ತ: ಪಿ. ಎನ್ ಮನಗೂಳಿ ಪಿಎಸ್‌ಐ, ಝಳಕಿ ಪೊಲೀಸ್ ಠಾಣೆ. ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 01.09.2021 ರಂದು ಝಳಕಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.

**3] ಮನಗೂಳಿ ಪೊಲೀಸ ಠಾಣೆ ಗುನ್ನಾ. ನಂ: 102/2021 ಕಲಂ: 78(3) ಕೆ.ಪಿ.ಆ್ಯಕ್ಟ**

ದಿನಾಂಕ: 31.08.2021 ರಂದು ಮದ್ಯಾಹ್ನ 3:45 ಗಂಟೆಗೆ ಇದರಲ್ಲಿ ಆರೋಪಿತನಾದ ಈರನಗೌಡ @ ರವಿ ತಂದೆ ಬಸನಗೌಡ ಪಾಟೀಲ ಸಾ॥ ಬಜಾರ ಓಣಿ ಮನಗೂಳಿ. ಈತನು ಮನಗೂಳಿ ಪಟ್ಟಣದ ಪಟ್ಟಣ ಪಂಚಾಯತ ಹತ್ತಿರ ಇರುವ ಕಾಯಿಪಲ್ಲೆ ಬಜಾರದಲ್ಲಿ ಸಾರ್ವಜನಿಕ ಸ್ಥಳದಲ್ಲಿ ರಸ್ತೆ ಬದಿಯಲ್ಲಿ ಅನಧಿಕೃತವಾಗಿ ತನ್ನ ಪಾಯದೆಗೋಸ್ಕರ 01 ರೂಪಾಯಿಗೆ 80 ರೂಪಾಯಿ ಕೊಡುವ ಕರಾರಿನ ಮೇಲೆ ಕಲ್ಯಾಣ ಓ.ಸಿ ಅಂಬುವ ಮಟಕಾ ಜೂಜಾಟವನ್ನು ಆಡಿಸುತ್ತಿರುವಾಗ ಸಿಕ್ಕಿದ್ದು, ಈ ಬಗ್ಗೆ ಸ:ತ: ಆರ್. ಬಿ. ಮಮದಾಪೂರ ಪಿಎಸ್‌ಐ ಮನಗೂಳಿ ಪಿಎಸ್ ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 01.09,2021 ರಂದು ಮನಗೂಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.